ಕರ್ನಾಟಕ ವಿಧಾನ ಸಭೆ

ಸೋಮವಾರ, 20ನೇ ಫೆಬ್ರವರಿ 1984

ಸದನವು ವಿಧಾನ ಸೌಧದಲ್ಲಿರುವ ಸಭಾಂಗಣದಲ್ಲಿ ಬೆಳಿಗ್ಗೆ ಒಂಭತ್ತು ಗಂಟೆಗೆ ಸಮಾವೇಶಗೊಂಡಿತು.

ಸಭಾಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ಕೊಡಲಾದ ಉತ್ತರಗಳು)

254 (495) ಶ್ರೀ ವಿ. ಧನಂಜಯಕುಮಾರ್ (ಮಂಗಳೂರು).-- ಮಾನ್ಯ ಆಹಾರ ಮತ್ತು ನಾಗರೀಕ ಪೂರೈಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.-

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾರೀಫ್ ಬೆಳೆಯಲ್ಲಿ ಬೆಳೆದ ಭತ್ತದ ಪ್ರಮಾಣವೆಷ್ಟು ;

ಆ) ದಕ್ಷಿಣ ಕನ್ನಡ ಜಿಲ್ಲೆಗೆ ನಿಗದಿಗೊಳಿಸಿದ ಲೆವಿ ಪ್ರಮಾಣವೆಷ್ಟು ? ಮತ್ತು ಹಿಂದಿನ ವರ್ಷಗಳ ವಿವರವನ್ನೊದಗಿಸುವುದು ;

ಇ) ಲೆವಿ ವಸೂಲಾತಿಗೆ ಕೈಕೊಂಡ ಕ್ರಮಗಳೇನು ?

ಶ್ರೀ ಬಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಪೂರೈಕೆ ಮಂತ್ರಿಗಳು).-ಅ)1,92,268 ಮೆಟ್ರಿಕ್ ಟನ್‌ಗಳು.

ಆ) 1983-84ರ ಸಾಲಿನ ನಿಗದಿಗೊಳಿಸಿದ ಅಕ್ಕಿಯ ಲೆವಿ ಗುರಿ 12,375 ಟನ್‌ಗಳು. ಹಿಂದಿನ ಮೂರು ವರ್ಷಗಳ ಲೆವಿ ಗುರಿ ಈ ಕೆಳಗಿನಂತಿದೆ :

	ಲೆವಿ ಗುರಿ ಕ್ವಿಂಟಾಲುಗಳಲ್ಲಿ
1980-81	40,230
1981-82	95,000
1982-83	55,000

ಇ) ಭಾರತೀಯ ಆಹಾರ ನಿಗಮ ಮತ್ತು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮಗಳನ್ನು ಕ್ರಮವಾಗಿ ಅಕ್ಕಿ ಮತ್ತು ಭತ್ತದ ಸಂಗ್ರಹಣೆಗಾಗಿ ನಿಯಮಿಸಲಾಗಿದೆ.

ಶ್ರೀ ವಿ. ಧನಂಜಯ ಕುಮಾರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೂಟ್ಟಂಥ ಉತ್ತರದ ಪ್ರಕಾರ 1980-81 ರಲ್ಲಿ 40,230 ಕ್ವಿಂಟಾಲುಗಳು, 1981-82 ರಲ್ಲಿ 95,000 ಕ್ವಿಂಟಾಲುಗಳು, 1982-83 ರಲ್ಲಿ 55,000 ಕ್ವಿಂಟಾಲುಗಳ ಲೆವಿ ಗುರಿಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿಗದಿಗೊಳಿಸ ಲಾಗಿತ್ತು, ಈ ವರ್ಷ ಅಂದರೆ 1983-84 ರಲ್ಲಿ 12,375 ಟನ್‌ಗಳು ಎಂದು ಲೆವಿ ಗುರಿಯನ್ನು ನಿಗದಿ ಮಾಡಿದ್ದೀರಿ. ಇಷ್ಟು ಹೆಚ್ಚು ಗುರಿಯನ್ನು ನಿಗದಿ ಮಾಡಲಿಕ್ಕೆ ಕಾರಣವೇನು ? ಎರಡನೆಯದಾಗಿ, ಈಗಾ ಗಲೇ ನಿಗದಿಗೊಳಿಸಿರುವಂಥ ಗುರಿಯಲ್ಲಿ ಎಷ್ಟು ಅಕ್ಕಿ ಅಥವಾ ಭತ್ತ ಸಂಗ್ರಹವಾಗಿದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಬಿ. ಬಸವಣ್ಣಪ್ಪ.--ಸನ್ಮಾನ್ಯ ಅಧ್ಯಕ್ಷರೆ, ಈ ವರ್ಷ 3 ಲಕ್ಷಟನ್ ಅಕ್ಕಿ ಸಂಗ್ರಹಣೆ ಮಾಡ ಬೇಕು ಎಂದು ಗುರಿ ಇಟ್ಟುಕೊಂಡಿದ್ದೇವೆ. ಕಾರಣವಿಷ್ಟೆ, ಪಡಿತರ ಪದ್ಧತಿಯಲ್ಲಿ 20 ಸಾವಿರ ಟನ್ ಅಕ್ಕಿ ವಿತರಣೆಮಾಡಬೇಕಾಗಿತ್ತು, ಅದು ಈಗ 40 ಸಾವಿರ ಟನ್‌ವರೆಗೆ ಬೇಡಿಕೆ ಬಂದಿದೆ. ನಮ್ಮ ಸರ್ಕಾರ ಬಂದಮೇಲೆ ಸುಧಾರಿತ ಉತ್ತಮ ಅಕ್ಕಿಯನ್ನು ಪಡಿತರ ಪದ್ಧತಿಯ ಮುಖಾಂತರ ಕೊಡುತ್ತಿರುವುದರ ಪರಿಣಾಮ ಈ ಒಂದು ವಾತಾವರಣ ನಿರ್ಮಾಣವಾಗಿದೆ. ಈಗ 40 ಸಾವಿರ ಟನ್ ಬೇಕೆಂಬ ಬೇಡಿಕೆ ಇದೆ. ಆದಕ್ಕೋಸ್ಕರ ನಾವು ಟಾರ್ಗೆಟನ್ನು ಜಾಸ್ತಿಮಾಡಬೇಕಾಗಿದೆ. ಆದುದರಿಂದ ಈಗ 3 ಲಕ್ಷ ಟನ್ ಎಂದು ನಿಗಡಿಮಾಡಿದ್ದೇವೆ. ಹಿಂದೆಲ್ಲಾ ಕಡಿಮೆ ಇತ್ತು. ಈಗ 1,23,750 ಕ್ವಿಂಟಾಲ್ ಅಕ್ಕಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿಗದಿಗೊಳಿಸಿದೆ. ಇದೇರೀತಿ ಇತರೆ ಜಿಲ್ಲೆಗಳಲ್ಲೂ ನಾವು ಹೆಚ್ಚುಮಾಡಿದ್ದೇವೆ. ಇದು ಹೆಚ್ಚಾಗಲಿಕ್ಕೆ ಕಾರಣ. ಸೌತ್ ಕೆನರಾದಲ್ಲಿ ವಸೂಲಿಯಾದದ್ದು 15 ಸಾವಿರ ಟನ್ ಅಕ್ಕಿ, 2 ಸಾವಿರ ಟನ್ ಭತ್ತ.

ಶ್ರೀ ವಿ ಧನಂಜಯ ಕುಮಾರ್.—ಮಂಗಳೂರು ನಗರ ಪಡಿತರ ಪ್ರದೇಶದಲ್ಲಿ ಕಳೆದ ವರ್ಷಗಳ ಸಾಲಿನಲ್ಲಿ ಅಂದರೆ 1981 82 ಹಾಗೂ 1982-83 ರಲ್ಲಿ ಒಂದು ಕಾರ್ಡಿಗೆ 60 ಕೇಜಿ ಅಕ್ಕಿಯನ್ನು ಒದಗಿಸುತ್ತಿದ್ದರು. ಆದರೆ 1983-84 ನೇ ಸಾಲಿನಲ್ಲಿ ಆ ಪ್ರಮಾಣವನ್ನು ಮತ್ತಷ್ಟು ಕಡಿಮೆಗೊಳಿಸಿ 30 ಕೆಜಿ ಅಕ್ಕಿಯನ್ನು ಒಂದು ಕಾರ್ಡಿಗೆ ಮಂಗಳೂರು ನಗರ ಪಡಿತರ ಪ್ರದೇಶದಲ್ಲಿ ಕೊಡುತ್ತಿದ್ದಾರೆ. ಆದೇ ರೀತಿ ಹಳ್ಳಿಗಳಲ್ಲಿ ಕೇವಲ 5 ಕೇಜಿ ಅಥವಾ 3 ಕೇಜಿ ಅಕ್ಕಿಯನ್ನು ಒಂದು ಕಾರ್ಡಿಗೆ ಒಂದು ತಿಂಗಳಿಗೆ ಒದಗಿಸುತ್ತಿದ್ದಾರೆ ಇಷ್ಟು ಕಡಿಮೆ ಪ್ರಮಾಣದಲ್ಲಿ ಪಡಿತರ ಅಕ್ಕಿಯನ್ನು ಒದಗಿಸುತ್ತಿದ್ದಾರೆ. ಇಷ್ಟು ಇದ್ದರೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಲೆವಿಯನ್ನು ಸಂಗ್ರಹ ಮಾಡುವುದಕ್ಕೆ ಕಾರಣ ಏನು ? ಎರಡನೆಯದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆಯುವಂತಹ ಭತ್ತ ಅಥವಾ ಅಕ್ಕಿ ಆ ಜಿಲ್ಲೆಗೇ ಸಾಕಾಗುವುದಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ನಾನು ಭಾವಿಸುತ್ತೇನೆ. ಹಾಗಿದ್ದರೂ ಲೆವಿಯನ್ನು ಸಂಗ್ರಹಣೆ ಮಾಡುವುದಕ್ಕೆ ಕಾರಣವೇನು ?

ಶ್ರೀ ಜಿ ಬಸವಣ್ಣಪ್ಪ.—ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ದಕ್ಷಿಣ ಕನ್ನಡ ಜಿಲ್ಲೆಗೆ ಹಿಂದೆ ಎಂದೂ ಕೊಡದೆ ಇರತಕ್ಕಂಥ ರೀತಿಯಲ್ಲಿ ಉತ್ತಮಗುಣಮಟ್ಟದ ಅಕ್ಕಿಯನ್ನು ಸರಬರಾಜುಮಾಡುತ್ತಿದ್ದೇವೆ. ಮಂಗಳೂರು ನಗರದಲ್ಲಿ ಪಡಿತರ ವ್ಯವಸ್ಥೆಯಿಂದ ಒಂದು ಕಾರ್ಡಿಗೆ ೦() ಕೆ. ಜಿ ಅಕ್ಕಿಯನ್ನು ಕೊಡುತ್ತಿದ್ದೇವೆ. ಪುರಸಭೆ ಇರತಕ್ಕಂತಹ ಕಡೆ ಒಂದು ಕಾರ್ಡಿಗೆ 10 ಕೆಜಿ ಅಕ್ಕಿಯನ್ನು ಕೊಡುತ್ತಿದ್ದೇವೆ. ಗ್ರಾಮಾಂತರ ಪ್ರದೇಶದಲ್ಲಿ ಒಂದು ಕಾರ್ಡಿಗೆ 5 ರಿಂದ 6 ಕೆಜಿ ಅಕ್ಕಿಯನ್ನು ಕೊಡುತ್ತಿದ್ದೇವೆಂದು ಶ್ರೀಮಾನ್ ಧನಂಜಯ ಕುಮಾರ್ ರವರೂ ಹೇಳಿದ ಮಾತು ಸತ್ಯಕ್ಕೆ ದೂರವಾದುದು. ಈಗ ನಾವು ಅಕ್ಕಿಯ ಗುಣಮಟ್ಟ ಯಾವ ರೀತಿ ಇದೆ ಎಂಬುದನ್ನು ಮಾನ್ಯ ಸದಸ್ಯರೇ ಹೇಳಲಿ.

ಶ್ರೀ ಧನಂಜಯ ಕುಮಾರ್.—ಅಕ್ಕಿಯ ಗುಣಮಟ್ಟ ಒಳ್ಳೆಯದು ಇದೆ. ಆದರೆ ಕೊಡತಕ್ಕಂತಹ ಪ್ರಮಾಣದಲ್ಲಿ ಕಡಿಮೆ ಮಾಡಿರುವುದಕ್ಕೆ ವಿನಂತಿ ಕೊಡಬೇಕು.

ಶ್ರೀ ಜಿ. ಬಸವಣ್ಣಪ್ಪ.—ಈ ಸಾಲಿನ ಖಾರಿಫ್ ಸೀಸನ್‌ನಲ್ಲಿ 1,92.268 ಮೆಟ್ರಿಕ್‌ಟನ್ ಅಕ್ಕಿ ಆ ಜಿಲ್ಲೆಯಲ್ಲಿ ಉತ್ಪಾದನೆಯಾಗಿದ್ದು ನಾವು ಕೇವಲ 12.375 ಟನ್ ಅಕ್ಕಿಯನ್ನು ಮಾತ್ರ ಲೆವಿ ರೂಪದಲ್ಲಿ ಕೇಳುತ್ತಿದ್ದೇವೆ ಆದ್ದರಿಂದ ಇದು ಅಷ್ಟೇನು ಹೆಚ್ಚಿನ ರೀತಿಯಲ್ಲಿ ವಸೂಲಿ ಮಾಡುತ್ತಿದ್ದೇವೆಂಬುದು ಸರಿಯಾದುದಲ್ಲ

ಶ್ರೀ ಕೆ. ರಾಮಭಟ್.—ದಕ್ಷಿಣ ಕನ್ನಡ ಜಿಲ್ಲೆಯ ಅಕ್ಕಿಯ ದೃಷ್ಟಿಯಿಂದ ಕೊರತೆಯ ಜಿಲ್ಲೆ ಎಂದು ಸರ್ಕಾರ ಒಪ್ಪಿಕೊಳ್ಳುತ್ತದೆಯೇ ? ಒಪ್ಪಿಕೊಂಡ ನಂತರವೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಲೆವಿಯನ್ನು ಸಂಗ್ರಹ ಮಾಡುವುದರಿಂದ ಸ್ವಾಭಾವಿಕವಾಗಿ ಜಿಲ್ಲೆಯಲ್ಲಿ ಅಕ್ಕಿಯಬೆಲೆ ಏರಿಕೆಯಾಗುವುದಕ್ಕೆ ಕಾರಣವಾಗುವುದಿಲ್ಲವೆ ? ಶಿವಮೊಗ್ಗದಲ್ಲಿರುವ ಅಕ್ಕಿಯ ಬೆಲೆಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅಕ್ಕಿಯ ಬೆಲೆಗೂ ಒಂದು ರೂಪಾಯಿ ವ್ಯತ್ಯಾಸ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅದನ್ನು ಹೋಗಲಾಡಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ?

ಶ್ರೀ ಜಿ. ಬಸವಣ್ಣಪ್ಪ.—ನಮ್ಮ ಆಹಾರ ನೀತಿಯ ಪ್ರಕಾರ ಭತ್ತದ ಮೂಮೆಂಟನ್ನು ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ತಡೆಗಟ್ಟಿರುವುದರಿಂದ ಒಂದೊಂದು ಜಿಲ್ಲೆಯಲ್ಲೂ ಬೆಲೆಯಲ್ಲಿ ವ್ಯತ್ಯಾಸ ಇರುವುದು ಸ್ವಾಭಾವಿಕ. ಫೆಬ್ರವರಿ 1984 ರಿಂದ ಆ ಬ್ಯಾನ್ ಅನ್ನು ತೆಗೆದು ಹಾಕಿಬಿಡುತ್ತೇವೆ. ಜಿಲ್ಲೆಯಿಂದ ಜಿಲ್ಲೆಗೆ ಒಟ್ಟು ರಾಜ್ಯದಲ್ಲಿ ಫ್ರೀ ಮೂವ್‌ಮೆಂಟ್ ಜಾರಿಗೆ ಬರುವುದರಿಂದ ಆವಾಗ ಬೆಲೆಯು ಎಲ್ಲ ಕಡೆ ಒಂದೇ ರೀತಿಯಲ್ಲಿ ಇರುತ್ತದೆ.

ಶ್ರೀ ಪಿ. ರಾಮಚಂದ್ರರಾವ್.—ಉಲ್ಲಾಳ ಕ್ಷೇತ್ರ ಸಬರ್ಬ್ ಆಗಿದ್ದು ಅಲ್ಲೂ ಕೂಡ ಒಂದು ಕಾರ್ಡಿಗೆ 30 ಕೆಜಿ ಅಕ್ಕಿಯನ್ನು ಪಡಿತರ ವ್ಯವಸ್ಥೆಯಲ್ಲಿ ಕೊಡುತ್ತಿದ್ದರು. ಈಗ ಅದನ್ನು ಕಡಿಮೆ ಮಾಡಿದ್ದಾರೆ. ಇದು ಏಕೆ ? ಅಲ್ಲಿರತಕ್ಕಂತಹ ಕಾರ್ಮಿಕರು ಯಾವ ರೀತಿ ಜೀವನ ಮಾಡಬೇಕು ?

ಅಧ್ಯಕ್ಷರು.—ಇದರ ಬಗ್ಗೆ ನಾನು ತೀರ್ಮಾನ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ ಬಸವಣ್ಣಪ್ಪ.—ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಸ್ವಲ್ಪಮಟ್ಟಿಗೆ ವಾಸ್ತವಾಂಶ ಇದೆ ಇದು ಸುಗ್ಗಿಯಕಾಲವಾಗಿರುವುದರಿಂದ ಕೆಲವು ಕಡೆ ಸರಬರಾಜುಮಾಡಿದ್ದೇವೆ. ನಮಗೆ ಇನ್ನೂ ಹೆಚ್ಚು ಅಕ್ಕಿ ಬೇಕೆಂದು ಅಲ್ಲಿಂದ ಒತ್ತಾಯ ಬಂದರೆ ಅಷ್ಟನ್ನು ಸರಬರಾಜು ಮಾಡುವುದಕ್ಕೆ ನಾವು ತಯಾರಾಗಿದ್ದೇವೆ.

ಶ್ರೀ ವಿ. ಧನಂಜಯ ಕುಮಾರ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 12 375 ಟನ್ ಅಕ್ಕಿಯನು ಏನು ಲೆವಿ ರೂಪದಲ್ಲಿ ವಸೂಲಿ ಮಾಡಬೇಕೆಂದು ತೀರ್ಮಾನ ಮಾಡಿದ್ದೀರಿ. ಅದನ್ನು ಅಲ್ಲಿಯೇ ಇಟ್ಟು, ಆ ಜಿಲ್ಲೆಯ ಜನರಿಗೆ ಅದನ್ನು ನಂತರ ಹಂಚುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಯೇ ?

ಶ್ರೀ ಜಿ. ಬಸವಣ್ಣಪ್ಪ.—ಅಕ್ಕಿಯನ್ನು ಸಂಗ್ರಹ ಮಾಡಿದ್ದನ್ನು ಎಫ್. ಸಿ. ಐ. ಗೋಡೋನ್‌ನಲ್ಲಿ

ಡುತ್ತೇವೆ. ಭತ್ತವನ್ನು ನಮ್ಮ ಫುಡ್ ಕಾರ್ಪೊರೇಷನ್‌ನ ಗೋಡೋನ್‌ನಲ್ಲಿ ಇಡುತ್ತೇವೆ ಆದರೆ ಜಿಲ್ಲೆಗೆ ಎಷ್ಟು ಪ್ರಮಾಣ ಅಕ್ಕಿಯನ್ನು ಕೊಡಬೇಕೋ ಅಷ್ಟನ್ನು ಬೆಂಗಳೂರಿನಲ್ಲಿ ಇರಲಿ, ಅಥವಾ ಬೇರೆ ಯಾವ ಜಿಲ್ಲೆಯಲ್ಲೇ ಇರಲಿ, ಅದನ್ನು ಆ ಜಿಲ್ಲೆಗೆ ಪ್ರತಿ ತಿಂಗಳು ಎಷ್ಟು ಅಕ್ಕಿಯನ್ನು ಕೊಡಬೇಕೋ ಅಷ್ಟನ್ನು ಕೊಡುವಂತಹ ಜವಾಬ್ದಾರಿ ನಮ್ಮದು.

ಅಧ್ಯಕ್ಷರು.--ಪ್ರಶ್ನೆ ಸಂಖ್ಯೆ 255 (500) ಶ್ರೀ ಸುದೀಂದ್ರರಾವ್ ಕಸಬೆ-ಆಬ್ಸೆಂಟ್

ಪ್ರಶ್ನೆ ನಂ. 256 (619) ಶ್ರೀ ಆರ್. ಎಸ್. ನಾಯ್ಕ-ಆಬ್ಸೆಂಟ್

ವೈದ್ಯಕೀಯ ಕಾಲೇಜುಗಳಿಗೆ ಸೇರಿಸುವಿಕೆ

257 (663) ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ;-

ಅ) ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 1982-83 ಮತ್ತು 1983-84ರ ವರೆಗೆ ಎಷ್ಟು ಜನ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗಿದೆ.

ಆ) ರಾಜ್ಯದ ಪ್ರತಿಯೊಂದು ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಶುಲ್ಕದೊಡನೆ ಎಷ್ಟು ಜನ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗಿದೆ.

ಇ) ರಾಜ್ಯದ ಪ್ರತಿ ವೈದ್ಯಕೀಯ ಕಾಲೇಜುಗಳ ಶುಲ್ಕದ ಮೊತ್ತ ಎಷ್ಟು :

ಈ) ರಾಜ್ಯದ ಪ್ರತಿಯೊಂದು ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶವಾದ ಕನ್ನಡಿಗರೆಷ್ಟು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯಮಂತ್ರಿಗಳು) —

ಕಾಲೇಜಿನ ಹೆಸರು	1982-83	1983-84
ಸರ್ಕಾರಿ ವೈದ್ಯಕೀಯ ಕಾಲೇಜುಗಳು		
1) ವೈದ್ಯಕೀಯ ಕಾಲೇಜು, ಬೆಂಗಳೂರು	152	152
2) ವೈದ್ಯಕೀಯ ಕಾಲೇಜು, ಮೈಸೂರು	102	106
3) ಕರ್ನಾಟಕ ವೈದ್ಯಕೀಯ ಕಾಲೇಜು, ಹುಬ್ಬಳ್ಳಿ	100	104
4) ವೈದ್ಯಕೀಯ ಕಾಲೇಜು, ಬಳ್ಳಾರಿ	100	103
ಖಾಸಗೀ ವೈದ್ಯಕೀಯ ಕಾಲೇಜುಗಳು		
1) ಜಿ. ಎನ್. ವೈದ್ಯಕೀಯ ಕಾಲೇಜು, ಬೆಳಗಾಂ	115	115
2) ಜೆ. ಜೆ. ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ	135	150
3) ಎಂ. ಆರ್. ವೈದ್ಯಕೀಯೆ ಕಾಲೇಜು, ಗುಲ್ಬರ್ಗಾ	115	115
4) ಕಸ್ತೂರಿಬಾ ವೈದ್ಯಕೀಯ ಕಾಲೇಜು, ಮಂಗಳೂರು	140	130
5) ಕಸ್ತೂರಿಬಾ ಮೆಡಿಕಲ್ ಕಾಲೇಜು, ಮಣಿಪಾಲ್	150	150
6) ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಂಗಳೂರು	130	130
7) ಡಾ: ಅಂಬೇಡ್ಕರ್ ಮೆಡಿಕಲ್ ಕಾಲೇಜು ಬೆಂಗಳೂರು	130	130
8) ಎಂ. ಎಸ್. ರಾಮಯ್ಯ ವೈದ್ಯಕೀಯ ಕಾಲೇಜು, ಬೆಂಗಳೂರು	130	130
9) ಸೆಂಟ್ ಜಾನ್ಸ್ ವೈದ್ಯಕೀಯ ಕಾಲೇಜು, ಬೆಂಗಳೂರು	60	60
೪) ಕಾಲೇಜಿನ ಹೆಸರು		
) ಜಿ. ಎನ್. ವೈದ್ಯಕೀಯ ಕಾಲೇಜು, ಬೆಳಗಾಂ	50	47
) ಜೆ. ಜೆ. ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ	70	95
ಎಂ. ಆರ್. ವೈದ್ಯಕೀಯ ಕಾರೇಜು, ಗುಲ್ಬರ್ಗಾ	50	47
ಕಸ್ತೂರಿಬಾ ವೈದ್ಯಕೀಯ ಕಾಲೇಜು, ಮಂಗಳೂರು	75	55
ಕೆಂಪೇಗೌಡ ವೈದ್ಯಕೀಯ ಕಾಲೇಜು, ಬೆಂಗಳೂರು	120	100
ಡಾ : ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಬೆಂಗಳೂರು	120	100
ಎಂ. ಎಸ್. ರಾಮಯ್ಯ ವೈದ್ಯಕೀಯ ಕಾಲೇಜು, ಬೆಂಗಳೂರು	120	100